ಕೆಲಸ ಮಾಡದಿರಬಹುದು. ಇನ್ನಷ್ಟು ತಿಳಿಯಿರಿ

## ಸಾಧನಗಳು

ಉದಾಹರಣೆಗೆ, ನೀವು Google Play ನಿಂದ ಖರೀದಿಸುವ ಅಪ್ಲಿಕೇಶನ್ ಅನ್ನು ಇನ್‌ಸ್ಟಾಲ್ ಮಾಡಲು ಅಥವಾ ಚಲನಚಿತ್ರವನ್ನು ವೀಕ್ಷಿಸಲು ನೀವು ಯಾವ ಸಾಧನವನ್ನು ಬಳಸಲು ಬಯಸುತ್ತೀರಿ ಎನ್ನುವುದನ್ನು ನಿರ್ಧರಿಸುವಲ್ಲಿ ನಿಮಗೆ ಸಹಾಯ ಮಾಡಲು ನಿಮ್ಮ ಸಾಧನಗಳ ಮಾಹಿತಿಯನ್ನು ನಾವು ಬಳಸಬಹುದು. ನಿಮ್ಮ ಖಾತೆಯನ್ನು ಸಂರಕ್ಷಿಸಲು ಸಹಾಯ ಮಾಡಲು ಕೂಡಾ ನಾವು ಈ ಮಾಹಿತಿಯನ್ನು ಬಳಸುತ್ತೇವೆ.

## ಸಾರ್ವಜನಿಕರಿಗೆ ಪ್ರಯೋಜನಕಾರಿ

ಉದಾಹರಣೆಗೆ, ಸಾರ್ವಜನಿಕರಿಗೆ ತರಬೇತಿ ನೀಡಲು, ಸಂಶೋಧನೆಯನ್ನು ಸುಗಮಗೊಳಿಸಲು ಮತ್ತು ಆ ವಿನಂತಿಗಳ ಬಗ್ಗೆ ಪಾರದರ್ಶಕತೆಯನ್ನು ಒದಗಿಸಲು ನಮ್ಮ ಸೇವೆಗಳಿಂದ ವಿಷಯವನ್ನು ತೆಗೆದುಹಾಕುವ ವಿನಂತಿಗಳ ಕುರಿತು ನಾವು ಮಾಹಿತಿಯನ್ನು ಪ್ರಕ್ರಿಯೆಗೊಳಿಸುತ್ತೇವೆ.

## ಸಾರ್ವಜನಿಕರು

ಉದಾಹರಣೆಗೆ, ವಿನಂತಿಗಳನ್ನು ಮೌಲ್ಯಮಾಪನ ಮಾಡಲು ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು, ಹೊಣೆಗಾರಿಕೆಯನ್ನು ಹೆಚ್ಚಿಸಲು ಮತ್ತು ದುರುಪಯೋಗ ಮತ್ತು ವಂಚನೆ ಮಾಡುವ ಅಭ್ಯಾಸಗಳನ್ನು ತಡೆಯಲು Google ನ ವಿಷಯ ತೆಗೆದುಹಾಕುವ ನೀತಿ ಅಥವಾ ಅನ್ವಯವಾಗುವ ಕಾನೂನಿಗೆ ಅನುಸಾರವಾಗಿ ನಮ್ಮ ಸೇವೆಗಳಿಂದ ವಿಷಯವನ್ನು ತೆಗೆದುಹಾಕುವ ವಿನಂತಿಗಳ ಕುರಿತ ಮಾಹಿತಿಯನ್ನು ನಾವು ಪ್ರಕ್ರಿಯೆಗೊಳಿಸುತ್ತೇವೆ.

## ಸಾರ್ವಜನಿಕವಾಗಿ ಪ್ರವೇಶಿಸಬಹುದಾದ ಮೂಲಗಳು

Google ನ ಭಾಷಾ ಮಾದರಿಗಳಿಗೆ ತರಬೇತಿ ನೀಡುವುದಕ್ಕಾಗಿ ಮತ್ತು Google Translate ನಂತಹ ವೈಶಿಷ್ಟ್ಯಗಳನ್ನು ರಚಿಸುವುದಕ್ಕೆ ಸಹಾಯ ಮಾಡಲು ನಾವು ಆನ್‌ಲೈನ್‌ನಲ್ಲಿ ಸಾರ್ವಜನಿಕವಾಗಿ ಲಭ್ಯವಿರುವ ಅಥವಾ ಇತರ ಸಾರ್ವಜನಿಕ ಮೂಲಗಳಲ್ಲಿ ಲಭ್ಯವಿರುವ ಮಾಹಿತಿಯನ್ನು ಸಂಗ್ರಹಿಸಬಹುದು. ನಿಮ್ಮ ವ್ಯಾಪಾರದ ಮಾಹಿತಿಯು ವೆಬ್‌ಸೈಟ್‌ನಲ್ಲಿ ಕಾಣಿಸಿಕೊಂಡರೆ, ನಾವು ಅದನ್ನು Google ಸೇವೆಗಳಲ್ಲಿ ಸೂಚಿ ಮಾಡಿಕೊಳ್ಳಬಹುದು ಮತ್ತು ಪ್ರದರ್ಶಿಸಬಹುದು.

## ಸುಧಾರಣೆಗಳನ್ನು ಮಾಡಲು

ಉದಾಹರಣೆಗೆ, ಜನರು ನಮ್ಮ ಸೇವೆಗಳೊಂದಿಗೆ ಹೇಗೆ ಸಂವಹಿಸುತ್ತಾರೆ ಎನ್ನುವುದನ್ನು ವಿಶ್ಲೇಷಿಸಲು ನಾವು ಕುಕೀಗಳನ್ನು ಬಳಸುತ್ತೇವೆ. ಮತ್ತು ಆ ವಿಶ್ಲೇಷಣೆಯು, ಇನ್ನಷ್ಟು ಉತ್ತಮವಾದ ಉತ್ಪನ್ನಗಳನ್ನು ನಿರ್ಮಿಸಲು ನಮಗೆ ಸಹಾಯ ಮಾಡಬಹುದು. ಉದಾಹರಣೆಗೆ, ನಿರ್ದಿಷ್ಟ ಕಾರ್ಯವೊಂದನ್ನು ಪೂರೈಸಲು ಜನರು ತುಂಬಾ ಸಮಯ ವ್ಯಯಿಸಬೇಕಾಗುತ್ತದೆ ಅಥವಾ ಕಾರ್ಯದ ಹಂತಗಳನ್ನು

